# ನಾನು, ನನ್ನದು

ಅದ್ವೈತ ಶಿಖಾಮಣಿ ಶ್ರೀ ಶಂಕರಾಚಾರ್ಯರು ವ್ಯಕ್ತಿಯ ಸಮಸ್ತ ದುಃಖಕ್ಕೆ ಮೂಲ ಕಾರಣ ಅವನಲ್ಲಿರುವ 'ತಾನು ಮತ್ತು ತನ್ನದು' ಎಂಬ ಮೋಹಗಳು ಎಂದು ಹೇಳಿದ್ದಾರೆ. ಹಾಗೆ ನೋಡಿದರೆ ವ್ಯಕ್ತಿಯ ಬದುಕಿನ ಎಲ್ಲಾ ರುಚಿ ಮತ್ತು ಅಭಿರುಚಿಗಳು ಈ 'ತಾನು ಮತ್ತು ತನ್ನದು' ಎಂಬ ಆಂತರಿಕ ಭಾವದ ಅಕಾಂಕ್ಷೆಗಳ ಅಭಿವ್ಯಕ್ತ ಸ್ವರೂಪಗಳೇ ಆಗಿವೆ. ಶಂಕರಾಚಾರ್ಯರು 'ತಾನು ಮತ್ತು ತನ್ನದು' ಎಂಬ ಈ ಉಪಾದಿಗಳ ಬಗ್ಗೆ ಹೊಸದಾಗಿ ಹೇಳುತ್ತಿಲ್ಲ. ಬಹು ಸೂಕ್ಷ್ಮವಾಗಿ ಅವಲೋಕಿಸಿದರೆ ಬುದ್ಧನ 'ಆಸೆಯೇ ದುಃಖಕ್ಕೆ ಮೂಲ ಕಾರಣ' ಎಂಬ ಸಿದ್ಧಾಂತದ ವಿವರಣಾ ರೂಪವಾಗಿ ಅದು ಕಾಣುತ್ತಿದೆ. ವ್ಯಕ್ತಿಯಲ್ಲಿ 'ತಾನು ಮತ್ತು ತನ್ನದು' ಎಂಬ ಭಾವಗಳನ್ನು ತೃಪ್ತಿಪಡಿಸಿಕೊಳ್ಳುವ ಅವನ ಕ್ರಿಯಾ ರೂಪಗಳೇ ಅವನ ಬದುಕಿನ ಉದ್ದೇಶಿತ ನಡೆಗಳಾಗಿರುತ್ತವೆ. ಈ ನಡೆಗಳು ತನ್ನ ವೈಯಕ್ತಿಕ ಈಡೇರಿಕೆಗಳ ಪರಿಧಿಯಲ್ಲೇ ಮಿತ ಸ್ವರೂಪದ ವ್ಯಾಪ್ತಿಯಲ್ಲಿದ್ದಾಗ ಅದರಿಂದ ಸಮಾಜದ ಇನ್ನಿತರ ಮನುಷ್ಯ– ಪ್ರಾಣಿ, ಸಸ್ಯ ಸಂಕುಲಗಳ ಬದುಕಿನ ಅಸ್ತಿತ್ವಕ್ಕೆ ಧಕ್ಕೆ ಬರುವುದಿಲ್ಲ. ಆದರೆ ಅದು ಮಿತಿ ಮೀರಿದಾಗ ದುರಾಸೆಯ ವ್ಯಾಪ್ತಿಗೆ ವಿಸ್ತರಿಸಿ ಕಬಳಿಕೆ ಸ್ವರೂಪವನ್ನು ಪಡೆಯುತ್ತದೆ. ಈ 'ಜಗತ್ತಿನ ಸಮಸ್ತವೆಲ್ಲವೂ ಇರುವುದು ತನಗಾಗಿಯೇ' ಎಂಬ ದುರಾಸೆಯಿಂದ ಅವನು ಲೋಭಿಯಾಗುತ್ತಾನೆ.

ಈ ಲೋಭತ್ವ ಅಷ್ಟು ಸುಲಭವಾಗಿ ಈಡೇರುವಂಥದ್ದಲ್ಲ, ಏಕೆಂದರೆ ಪ್ರತಿಯೊಂದು ವ್ಯಕ್ತಿ ಘಟಕವು ಇದೇ ಬಗೆಯ ತನ್ನ ಲೋಭತ್ವದ ಈಡೇರಿಕೆಗಾಗಿ ಮತ್ತೊಂದು ವ್ಯಕ್ತಿ ಘಟಕದ ಜೊತೆ ಸ್ಪರ್ಧಿಸುತ್ತಿರುತ್ತದೆ. ಈ ಬಗೆಯ ಸ್ಪರ್ಧೆ ಅಲ್ಪ ಗೆಲುವುಗಳನ್ನೂ ಅಧಿಕ ಸೋಲುಗಳನ್ನೂ ತಂದೊಡ್ಡುವುದರಿಂದ ಶಂಕರಾಚಾರ್ಯರು ಹೇಳುವಂತೆ ವ್ಯಕ್ತಿಗೆ ನೋವು ಸಹಜವಾಗಿ ಉಂಟಾಗುತ್ತದೆ. ವ್ಯಕ್ತಿಯಲ್ಲಿರುವ 'ತಾನು ಮತ್ತು ತನ್ನದು' ಎಂಬ ಭಾವಗಳು ಈಡೇರದಿದ್ದಾಗ, ಅವು ನೇರವಾಗಿ ಅವನೊಳಗಿರುವ ಅಹಂಕಾರಕ್ಕೆ ಪೆಟ್ಟು ತಾಗುತ್ತದೆ. ವ್ಯಕ್ತಿಯ ಅಂತರಂಗದ 'ಅಹಂ'ಗೆ ನೋವುಗಳುಂಟಾದಾಗ, ಅದು ಕುಟುಂಬದ ಮಟ್ಟದಲ್ಲಾಗಲೀ, ಸಾಮಾಜಿಕ ಮಟ್ಟದಲ್ಲಾಗಲೀ ವ್ಯಕ್ತಿ ಅವಮಾನವೆಂದೇ ಭಾವಿಸುತ್ತಾನೆ. ಇದು ವ್ಯಕ್ತಿಯ ದೈಹಿಕ ಸೋಲುಗಳಿಗಿಂತ ಮಿಗಿಲಾಗಿ ಅಂತರಂಗದ ಸೋಲುಗಳಿಂದುಂಟಾಗುವ ಪ್ರಕ್ರಿಯೆಯ ಅಭಿವ್ಯಕ್ತಿ.

ಈ 'ತಾನು ಮತ್ತು ತನ್ನದು' ಎಂಬ ಪರಿಕಲ್ಪನೆ ವ್ಯಕ್ತಿ ಘಟಕವನ್ನು ಮೀರಿ ಕುಟುಂಬದ ವ್ಯಾಪ್ತಿಗೂ ಅನೇಕ ಸಂದರ್ಭಗಳಲ್ಲಿ ವಿಸ್ತರಿಸುತ್ತದೆ. ಕೇವಲ ತಾನೊಬ್ಬನಿಗಾಗುವ ಅವಮಾನಗಳಿಂದ ಮಾತ್ರವಲ್ಲದೇ ವ್ಯಕ್ತಿಯು ಕುಟುಂಬದ ಇತರ ಸದಸ್ಯರ ನಡೆಯಿಂದ ಸಮಾಜದ ಕಣ್ಣಳತೆಯಲ್ಲಿ ಕುಸಿಯುವ ಸಂದರ್ಭಗಳು ಬಂದಾಗ ಅಪಾರವಾದ ನೋವನ್ನನುಭವಿಸುತ್ತಾನೆ. ಈ ಕ್ರಿಯೆಯನ್ನು ತನ್ನ ಕುಟುಂಬದ ಸದಸ್ಯರು ತನಗೆ ಸಾಮಾಜಿಕ ಮಟ್ಟದಲ್ಲಿ ಮಾಡಿದ ಅವಮಾನವೆಂದು ಭಾವಿಸಿ ದುಃಖಿತನಾಗುತ್ತಾನೆ. ಇದೂ ಕೂಡ ಅವನೊಳಗಿರುವ 'ಅಹಂ'ನ ಅಭಿವ್ಯಕ್ತಿಯ ಮತ್ತೊಂದು ರೂಪವೇ ಆಗಿದೆ.

ಈ 'ತಾನು ಮತ್ತು ತನ್ನದು' ಎಂಬ ವರ್ತುಲದಿಂದ ಅಷ್ಟು ಸುಲಭವಾಗಿ ಬಿಡಿಸಿಕೊಳ್ಳಲು ಆಗುವುದಿಲ್ಲ. ಏಕೆಂದರೆ ವ್ಯಕ್ತಿ ಮೂಲತಃ ಕುಟುಂಬ ಜೀವಿ. ಕುಟುಂಬದ ಸಮಸ್ತ ಬಂಧುಗಳ ನಡುವೆ ವಂಶವಾಹಿಗಳ ಬೆಸುಗೆಯ ಕೊಂಡಿ ಎಣೆದುಕೊಂಡಿರುತ್ತದೆ. ಈ ಕೊಂಡಿಯ ಯಾವುದೇ ಒಂದು ಘಟಕ ಸಡಿಲಗೊಂಡರೂ ಕೊಂಡಿಯ ಬಿಗಿ ತಪ್ಪುತ್ತದೆ. ಆಗ ಬಂಧದ ಬಿಗಿ ತಪ್ಪುವುದರಿಂದ ಅದು ನೋವುಗಳ ಅಮೂರ್ತ ಸ್ವರೂಪದ ಮತ್ತೊಂದು ಬಗೆಯ ಸರಪಳಿಗಳನ್ನು ಸೃಷ್ಟಿ ಮಾಡಿಬಿಡುತ್ತದೆ. ಅದೇರೀತಿ ಇದೇ ಬಗೆಯ ಪ್ರಕ್ರಿಯೆ ಸಮಾಜ–ದೇಶಕ್ಕೂ ವಿಸ್ತರಿಸುತ್ತದೆ. ದೇಶದಲ್ಲಿ ಅಸಮಾನತೆಗಳು ತಾಂಡವವಾಡಿದಾಗ, ಭ್ರಷ್ಟಾಚಾರ ಅಧಿಕಗೊಂಡಾಗ, ಅನೈತಿಕ ನಡೆ ಎಲ್ಲೆಡೆ ವಿಜೃಂಭಿಸಿದಾಗ ಶುದ್ಧ ಚಾರಿತ್ರ್ಯದ ವ್ಯಕ್ತಿ ಘಟಕಗಳಿಗೆ ನೋವುಂಟಾಗುತ್ತದೆ. ಏಕೆಂದರೆ ವ್ಯಕ್ತಿಯನ್ನು ಈ ಸಮಾಜವನ್ನು ದೇಶವನ್ನು 'ತನ್ನ ಮತ್ತು ತನ್ನದು' ಎಂಬ ಭಾವನೆಯು ಬಂಧಿಸಿರುತ್ತದೆ. ಇದನ್ನು ಬೇಕಾದರೆ ನಾವು ಸಮಾಜ ಪ್ರೇಮ ಅಥವಾ ದೇಶ ಪ್ರೇಮ ಎಂದು ಕರೆಯಬಹುದು. ಈ ಪ್ರೇಮ ನಿಷ್ಠೆಗೆ ಭಂಗ ತರುವಂಥ ಘಟನೆಗಳು ಸಮಾಜದಲ್ಲಿ ನಡೆಯುತ್ತಿರುವಾಗ ಜಾಗತಿಕ ಮಟ್ಟದಲ್ಲಿ ತಮಗೆ ಅವಮಾನವಾಗುತ್ತಿದೆಯೆಂದು ವ್ಯಕ್ತಿ ಭಾವಿಸಿ ನೋವುಣ್ಣುತ್ತಾನೆ.

■ ಶಿಕಾಕು

## ಮಾತೇ ಮುತ್ತು

★ ಮನುಷ್ಯ ದುಃಖದಿಂದ ಅಳುತ್ತಾ ಕುಳಿತರೆ ರೋದನ ಹೆಚ್ಚುತ್ತದೆಯೇ ಹೊರತು, ದುಃಖ ದೂರವಾಗುವುದಿಲ್ಲ.

–ಪಂಚತಂತ್ರ

★ ಭವಿಷ್ಯತ್ತಿನೊಂದಿಗೆ ಯಾರು ಅತಿ ಸಮೀಪವರ್ತಿಯಾಗಿದ್ದಾನೋ ಅವನನ್ನು ನಾನು ಸನ್ಮಾರ್ಗಿ ಎಂದು ಭಾವಿಸುತ್ತೇನೆ.

–ಹೆನ್ರಿಕ್ ಇಬ್ಸನ್

★ ಶಾಂತಿಯಿಂದ ಸಂಪಾದಿಸಬಹುದಾದ ವಿಜಯ, ಸಂಗ್ರಾಮದಿಂದ ಸಾಧಿಸಬಹುದಾದುದಕ್ಕಿಂತ ಕಡಿಮೆಯದ್ದೇನಲ್ಲ.

–ಜಾನ್ ಮಿಲ್ಟನ್

★ ಹುಚ್ಚರ ಈ ದೊಡ್ಡ ರಂಗಸ್ಥಳಕ್ಕೆ ಬಂದೆವಲ್ಲ ಎಂದು ನಾವು ಹುಟ್ಟಿದಾಗ ಅಳುತ್ತೇವೆ.

–ಶೇಕ್ಸ್‌ಪಿಯರ್

★ ಪ್ರಿಯವಲ್ಲದಿದ್ದರೂ ಪಥ್ಯವಾದ ಮಾತಿನ ಪರಿಣಾಮ ಸುಖಕರವೇ ಆಗುವುದು. ಅಂಥ ಮಾತನ್ನು ಹೇಳುವವನೂ ಕೇಳುವವನೂ ಎಲ್ಲಿರುವನೋ ಅಲ್ಲಿ ಎಲ್ಲ ಸಂಪತ್ತುಗಳೂ ನಲಿಯುವವು.

–ಹಿತೋಪದೇಶ

★ ರಸಿಕರಾದ ಪಂಡಿತರಿಗೆ ತೃಪ್ತಿಯಾಗುವವರೆಗೂ ನನ್ನ ನಾಟಕ ಬರೆಯುವ ಕಲೆಯನ್ನು ಉತ್ತಮವೆಂದು ಹೇಳಲಾರೆ. ಎಷ್ಟೇ ಪಾಂಡಿತ್ಯವಿರಲಿ, ಸಾಮರ್ಥ್ಯವಿರಲಿ ಮನಸ್ಸು ತನ್ನನ್ನು ಮೆಚ್ಚುವುದಿಲ್ಲ.

–ಕಾಳಿದಾಸ

★ ಈ ಕಾರ್ಯ ಕಷ್ಟಕರವಾದದ್ದೆಂದು ಕರ್ತವ್ಯದಿಂದ ವಿಮುಖನಾಗುವುದು ಬುದ್ಧಿಗೇಡಿಯ ಲಕ್ಷಣ. ಆದರೆ ಸಾಹಸಗೈಯದೆ ಶ್ರೇಯಸ್ಸು ದೊರೆಯುವುದಿಲ್ಲ.

–ಹರಿಹರ ಸುಭಾಷಿತ

★ ವಿವೇಕಶಾಲಿಗಳಾದ ವಿದ್ವಾಂಸರು ಅಲಭ್ಯವಾದುದನ್ನು ಬಯಸುವುದಿಲ್ಲ. ನಷ್ಟವಾದದ್ದಕ್ಕೆ ವ್ಯಥೆ ಪಡುವುದಿಲ್ಲ. ಆಪತ್ಕಾಲದಲ್ಲಿ ಮೋಹಗೊಳ್ಳುವುದೂ ಇಲ್ಲ.

–ಮಹಾಭಾರತ

★ ಮಕ್ಕಳಲ್ಲಿ ತಪ್ಪು ಹುಡುಕುವವರಿಗಿಂತ ಅವರಿಗೆ ಯೋಗ್ಯ ಮಾರ್ಗದರ್ಶನ ನೀಡಬಲ್ಲವರ ಸಂಖ್ಯೆ ಹೆಚ್ಚಿರುವುದು ಅಗತ್ಯ.

–ಜೋಬರ್ಟ್

★ ಶ್ರದ್ಧೆಯಿಂದ ಕೆಲಸ ಮಾಡುವವರು ಮಹತ್ವದ ವಿಜಯ ಸಾಧಿಸಬಲ್ಲರು.

–ಎಮರ್‌ಸನ್

★ ತಿರಸ್ಕರಿಸಲಾಗದ ಒಂದು ಸುಖವಿದೆ; ಅದೇ ಇನ್ನೊಬ್ಬರಿಗಾಗಿ ಬದುಕು ಸವೆಸುವುದು.

–ಟಾಲ್‌ಸ್ಟಾಯ್

★ ವಸ್ತ್ರ, ಒಡವೆಗಳಿಂದ ಅಲಂಕರಿಸಿಕೊಂಡದ್ದು ಮನುಷ್ಯನನ್ನು ಅಲಂಕರಿಸುವುದಿಲ್ಲ. ಸಂಸ್ಕಾರಯುಕ್ತವಾಗಿ ಆಡುವ ಮಾತೇ ಮನುಷ್ಯನಿಗೆ ಅಲಂಕಾರ. ಒಡವೆಗಳು ನಾಶವಾಗುತ್ತವೆ, ಆದರೆ ವಾಣಿಯೆಂಬ ಅಲಂಕಾರವೇ ನಾಶವಾಗದೇ ಇರುವುದು.

–ನೀತಿ ಶತಕ

★ ಫಲಭರಿತವಾಗಿರುವ ಮರದ ಕೊಂಬೆಗಳು ಬಾಗುವುದು ಸಹಜ. ಅಂತೆಯೇ, ನೀನು ಮಹಾನ್ ವ್ಯಕ್ತಿಯಾಗಬೇಕಾದಲ್ಲಿ ತಗ್ಗಿಬಗ್ಗಿ ನಡೆಯುವುದನ್ನು ಕಲಿ.

–ರಾಮಕೃಷ್ಣ ಪರಮಹಂಸ

★ ಬೇರೆಯವರು ನಿಮ್ಮನ್ನು ಪ್ರಶಂಸಿಸಬೇಕು ಎನ್ನುವ ದೃಷ್ಟಿಯಿಂದ ದಾನ ಮಾಡಬೇಡಿ.

–ಏಸುಕ್ರಿಸ್ತ